Regd No M 1299 34 th Year ಕಾಲ 12—3—51

ಸ್ವಾಮಿ ಸೇವಕರುಗಳ ಸಂಘದ
ಶ್ರೀ ದ್ವಾರಕಾ ಜಗದ್ಗುರುಗಳವರ
ಜಯಂತ್ಯುತ್ಸವದಲ್ಲಿ ಪ್ರಕಟವಾಗುವ
ಪ್ರ ಬೋ ಧ
ಧಾರ್ಮಿಕ ಸಮಾಚಾರವನ್ನೊಳಗೊಂಡಿದೆ
ವಾರ್ಷಿಕ ಚಂದಾ
ಅಂಚೆವೆಚ್ಚ ಸಮೇತ 1—14—0

# ಸತ್ಯವಾದಿ
SATYAVADI

ಸ್ಥಾಪಕರು- ಅರಮನೆ ಸಿರಸ್ತೆದಾರ್ ಎಂ. ಎ. ಸುಬ್ಬಾಯ್ಯರು | ಬಿಡಿ ಪ್ರತಿ 3 ಪೈ

ಗೋ ರ ಕ್ಷ ಣ
[ ತಿಂಗಳಿಗೊಂದಾವರ್ತಿ ]
ವಾರ್ಷಿಕಚಂದಾ ಅಂಚೆವೆಚ್ಚ ಸೇರಿ 8 ಆಣೆ

Protect the Cow
ಗೋರಕ್ಷಣೆ ಸಡೆಯಲಿ

## ಪಾರ್ಲಿಮೆಂಟ್ನಲ್ಲಿ

ನವದೆಹಲಿಯಲ್ಲಿ ಸಮಾವೇಶವಾಗಿರುವ ಭಾರತ ಪಾರ್ಲಿಮೆಂಟ್ನಲ್ಲಿ ಆಚಾರ್ಯ ಪಾಲಿನಿಯವರು ಮೊನ್ನೆ ಅಂದಾಜುಪಟ್ಟಿ ಮೇಲೆ ಮಾತಾಡತ್ತ ಲಂಚ ಅತ್ಯಧಿಕ ಇರುವದೆಂದರು. ಡಾ| ಶಾಂ ಪ್ರಸಾದ ಮುಖರ್ಜಿಯವರು, ಪಾಕಿಸ್ತಾನದೊಡನೆ ನಡೆದಿರುವ ವ್ಯಾಪಾರ ಒಪ್ಪಂದ ವಿಧಿಯಿಂದ ಭಾರತಕ್ಕೆ ಅವಮಾನವಾಗಿದೆ ಎಂದರು.

## ಸಂಸ್ಥೆಗಳಿಗೆ ಸೌಲಭ್ಯ

ಭಾರತ ಸರ್ಕಾರ ಮೊನ್ನೆ ಪ್ರಕಟಣೆಯೊಂದನ್ನು ಇತ್ತು ನಿರ್ದಿಷ್ಟ ಪ್ರಮಾಣಕ್ಕಿಂತ ಸಕ್ಕರೆಯನ್ನು ಅಧಿಕ ತಯಾರಿಸುವ ಗಿರಣಿಗಳು ಹೆಚ್ಚು ಭಾಗವನ್ನು ನಿರಾತಂಕವಾಗಿ ಪೇಟೆಯಲ್ಲಿ ಮಾರಬಹುದೆಂದು ತಿಳಿಸಿದೆ.

## ಉಚ್ಚಾಟನೆ

ಮುಖ್ಯ ಮಂತ್ರಿಗಳ ಮಾತನ್ನೇ ಉಲ್ಲಂಘನೆ ಮಾಡಿದ ಕೆಲವು ಅಧಿಕಾರಿಗಳು ಮನೆಗೆ ಕಳಿಸಲ್ಪಟ್ಟರೆಂದು ಕಲ್ಕತ್ತ ವರದಿ.

## ಪಡಿತರ ಕುಸಿದಿದೆ

ಒರೋಡದಲ್ಲಿ ಪಡಿತರ ಕುಸಿದಿದೆ. ಆದುದರಿಂದ ವಿಶೇಷ ರೈಲುಗಳಲ್ಲಿ ಬೊಂಬಾಯಿನಿಂದ ಅಲ್ಲಿಗೆ ಧಾನ್ಯ ಸಾಗುತ್ತಿದೆ.

## ಅಲ್ಲೀ ರಾಜ್ಯಕ್ಕೂ ಆಸಕ್ತಿ

ವಿದೇಶದ ಕೆಲವು ಸರ್ಕಾರಗಳು ಭಾರತ ಸರ್ಕಾರಕ್ಕೆ ಪತ್ರ ಬರೆದು ಪಾಕಿಸ್ತಾನಕ್ಕೆ ನಿಬಂಧ ಕುರಿತು ವಿವರ ಪ್ರಾರ್ಥಿಸಿದೆ.

## ಸಂಸ್ಥಾನ ಹೊತನ ಹೆಪ್ಪೆ

ಮೈಸೂರು ಜನತಾ ಪಕ್ಷ – ಎಂಬ ರಾಜಕೀಯ ಪಕ್ಷ ಬೆಂಗಳೂರಿನಲ್ಲಿ ನಿನ್ನೆ ಹುಟ್ಟಿತು.

## ಎಚ್ಚರಿಕೆ

ಕಮ್ಯುನಿಸ್ಟರು ಹಿಂಸೆಯನ್ನು ಬಿಡಬೇಕು. ಕೇವಲ ಘೋಷಣೆಗಳು ಕೆಲಸಕ್ಕೆ ಬಾರದವು ಎಂದಿದ್ದಾರೆ ರಾಜಾಜಿ.

## ಮೊಸ್ತೋಗೆ ಡಾಂಗೆ

ಭಾರತ ಕಮ್ಯುನಿಸ್ಟ್ ಧುರೀಣ ಶ್ರೀ ಎಸ್. ಎ. ಡಾಂಗೆ ನಮ್ಮಸ್ತೋಗೆ ತೆರಳುವರೆಂದು ಗೊತ್ತಾಗಿದೆ. ಅವರ ಪ್ರಯಾಣ ವ್ಯವಸ್ಥೆಗಾಗಿ ನಾರಾಯಣರೆಡ್ಡಿ ಎಂಬವರು ಲೂಟಿ ಮಾಡಿದ ತುಂಬ ಧನದೊಡನೆ ತೆಲಗಾಣ ಪ್ರದೇಶ ತ್ಯಜಿಸಿದರೆಂದು ಗೊತ್ತಾಗಿದೆ.

## ನಂದಲ್ಲ ಜವಾಬ್ದಾರಿ

ಬರ್ಮಾ ಕುಮಾರಪ್ಪನವರು ಅಮೇರಿಕದಲ್ಲಿ ಮಾಡಿರುವ ಭಾಷಣಗಳಿಗೆ ನಾವೇನೂ ಜವಾಬ್ದಾರಿ ಅಲ್ಲವೆಂದು ಭಾರತ ಸರ್ಕಾರ ತಿಳಿಸಿದೆ.

## ಸ್ವಾಮಿವಿವೇಕಾನಂದರ ಭಾಷಣ

ಶ್ರೀ ಶ್ರೀ ಕರಸಾತ್ರಿ ಸ್ವಾಮಿವಿವೇಕಾನಂದರು ನಿನ್ನೆ ರಾತ್ರಿ ಮೈಸೂರು ರಂಗಾಚಾರ್ಲು ಪುರಭವನದ ಪ್ರಾಕಾರದಲ್ಲಿ ಭಾಷಣ ಮಾಡುತ್ತಾ, ಧರ್ಮವೇ ಅತ್ಯಂತ ಶ್ರೇಷ್ಠತವಾದುದು. ಈಗಿನ ಮುಖಂಡರ ಧರ್ಮ ನಿರಪೇಕ್ಷತೆಯನ್ನು ಸಹಿಸಲಾಗುವದಿಲ್ಲ – ಎಂದರು.

ಮೊನ್ನೆ ಶ್ರೀ ಶ್ರೀಗಳವರು ಭಾಷಣ ಮಾಡುತ್ತಾ, ಹಿಂದೂಕೋಡ್ ಮಸೂದೆ ಮಾಡಿದ್ದೇ ತಪ್ಪು; ಜಾರಿಗೆ ತರುವದು ಇನ್ನೂ ತಪ್ಪು ಎಂದರು.

## ಜನಸಂಖ್ಯೆ

ಮೈಸೂರು ನಗರದ ಜನಸಂಖ್ಯೆ 244334. ಸಂಸ್ಥಾನದ ಒಟ್ಟು ಜನಸಂಖ್ಯೆ 9071673.

## ಭಾರತ ಚಿತ್ರಕ್ಕೆ ಮಾನ್ಯತೆ

ಭಾರತ ಸರ್ಕಾರದಿಂದ ನಿರ್ಮಿಸಲ್ಪಟ್ಟ ಶಿಕ್ಷಣ ಚಲನಚಿತ್ರಗಳನ್ನು ಬ್ರಿಟಿಷ್ ಸ್ವೀಕರಿಸುವದೆಂದು ಕಾರ್ಮೆವೆಲ್ಲ್ ಕಾರ್ಯದರ್ಶಿ ಶ್ರೀ ವಾಕರರು ತಿಳಿಸಿರುವದಾಗಿ ಲಂಡನ್ ವಾರ್ತೆ.

## ದರೋಡೆ ನಡೆಯಿತು

ಅರ್ಧ ಲಕ್ಷ ರೂ. ದರೋಡೆ ಪೂರ್ವ ಗೋದಾವರಿ ಜಿಲ್ಲೆಯ ನರಸಾಪುರದ ಹತ್ತಿರ ಗ್ರಾಮವೊಂದರಲ್ಲಿ ನಡೆಯಿತೆಂದು ಮದರಾಸು ವಾರ್ತೆ.

## ಎರಡು ಲಕ್ಷ ರೂ. ಬೆಲೆ ಬಾಳೋ ಸುಪ್ಪತ್ತಿಗೆ !

ಪ್ರಪಂಚದಲ್ಲೆಲ್ಲ ಅತ್ಯಂತ ಖ್ಯಾತಿಪಡೆದಿರುವ ತಾಜ್ ಮಹಲ್‌ನಂತೆಯೇ ಕೆಂಪು, ವೈಢೂರ್ಯ, ರತ್ನಗಳಿಂದ ಅಸಮಾನ್ಯ ಕಲಾಕೌಶಲ್ಯದಿಂದಲೂ ಅಮೂಲ್ಯ ರತ್ನಾಭರಣಗಳಿಂದಲೂ ಕೂಡಿದ ಬಹು ಬೆಲೆಯ ಸುಪ್ಪತ್ತಿಗೆಯನ್ನು ಆಗ್ರಾದ ಪ್ರಖ್ಯಾತ ಕಲಾಶಿಲ್ಪಿಗಳ ಸಂಸಾರದವರು ತಯಾರ್ಮಾಡಿಸುತ್ತಾರೆ. ಇದಲ್ಲಿ ಆಗ್ರಾ ತಾಜ್ ಮಹಲ್ ಮತ್ತು ಕೆಂಪು ಕೋಟೆಯ ಚಿತ್ರಗಳೆಷ್ಟೆ ನೂರು ಬೆಳ್ಳಿ, 175 ಔನ್ಸ್ ಭಂಗಾರದ ದಾರ ಮತ್ತ ತಂತಿ, 140 ಔನ್ಸ್ ಬೆಳ್ಳಿ ದಾರ ಮತ್ತು ತಂತಿ ಉಪಯೋಗಿಸಲಾಗಿದೆ. ಇದರ ಬೆಲೆ 2 ಲಕ್ಷ ರೂಗಳಿಂದ 3 ಲಕ್ಷ ರೂಗಳೆಂದು ಅಂದಾಜು ಮಾಡಲಾಗಿದೆ ಇದನ್ನು ಅಮೇರಿಕ ವಸ್ತುಪ್ರದರ್ಶನಕ್ಕೆ ಕಳಿಸಲಾಗುವದಂತೆ

## ಸೂಚನೆ ಇತ್ತಿರುವರೆ ?

ರಾಷ್ಟ್ರಾಧಿಪತಿ ರಾಜೇಂದ್ರ ಪ್ರಸಾದರು ಭಾಷಾವಾರು ರಾಷ್ಟ್ರಂತ್ಯ ಬಗ್ಗೆ ಪರಿಶೀಲಿಸಬೇಕೆಂದು ಸೂಚಿಸಿರುವದಾಗಿ ತಿಳಿದುಬಂದಿದೆ

## ಮಾತುಕತೆ ವಿಫಲ

ಭಾರತ ಸರ್ಕಾರದೊಡನೆ ರೈಲ್ವೆ ಕೆಲಸಗಾರರ ಮಾತುಕತೆ ವಿಫಲವಾಯಿತು ಬರುವ ತಿಂಗಳು ರೈಲ್ವೆ ಕಾರ್ಮಿಕ ಸಭೆ ಸೇರುವದೆಂದು ಗೊತ್ತಾಗಿದೆ

Palace Engineer's Office, Mysore

## Abstract Notification

dated 3 rd March 1951

Sealed Tenders for construting Shop Godowns in the premises of the Palace Motikhana Building along New Santepet Road, Mysore, will be received till 3–30 P. M. on 15 th March 1951,

Please see Notification in the Mysore Gazette dated 22-2-51 and 1-3-51 and on the Notice Board of this Office for details.

Mysore
Dated 5th March 1951

R. L. Raju
Palace Engineer

ಉಡ್‌ಲಾಂಡ್ ಬಸ್ಸು ಅಮೋಘ 2 ನೇ ವಾರ
ನಿರೂಪರಾಯ್, ಜೀವರ್, ದುರ್ಗಕೋಟೆ ತ್ರಿಲೋಕಕಪೂರ್ ಪಾತ್ರವಹಿಸಿರುವ
ಹರಹರ ಮಹಾದೇವ
ಅಮೋಘ ಹಿಂದಿ ಪೌರಾಣಿಕ ಚಿತ್ರ ಪ್ರತಿ ದಿನ 3 ಪ್ರದರ್ಶನಗಳು

ರಣಜಿತ್ 6—3—51 ರಿಂದ
ನರ್ಗಿಸ್, ದಿಲೀಪ್ ಕುಮಾರ್, ಮನ್ವರ್ ಸುಲ್ತಾನ ಪಾತ್ರವಹಿಸಿರುವ
BABUL ಬಾಬುಲ್
ಅಮೋಘ ಹಿಂದಿ ಚಿತ್ರ — — ಪ್ರತಿ ದಿನ 3 ಪ್ರದರ್ಶನಗಳು

ಸಂಪುಟ ೯ ಸಂಚಿಕೆ ೨೬ ॥ಶ್ರೀ॥ ತಾ॥ 12-3-1951

# — ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದ ಮಹಾಧೀಶ್ವರರಾದ
**ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ**
ಔದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

ಶ್ರೀ ದ್ವಾರಕಾ ಶಾರದಾ ಪೀಠಾಧೀಶ್ವರ
ಜಗದ್ಗುರು ಶಂಕರಾಚಾರ್ಯ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರು

## ಗೋವಧೆಯನ್ನು ಕೂಡಲೇ ನಿಲ್ಲಿಸಿ

### ಅರ್ಜುನ್ ಭಾಗತನ ಜೀವ ಕಾಪಾಡಿ

(ಸ್ವಂ. ಸು. ತಂತಿ) ದೆಹಗಾಂ ಮಾ. 16— ಶ್ರೀ ದ್ವಾರಕಾ ಶಾರದಾ ಪೀಠದ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳು, ಮಾನ್ಯರಾದ ರಾಜೇಂದ್ರಬಾಬು, ನೆಹರೂಜಿ, ಮುನಿಷೀಜಿ, ತಾಂಡನ್‌ಜಿ ಮೊರ್‌ಜಿ, ಮುರಾರ್‌ಜೀ ಮತ್ತು ಅಹಮದಾಬಾದಿನ ಅಧಿಕಾರ ವರ್ಗದವರಿಗೆ ತಂತಿ ಕಳುಹಿಸಿ, ಅಹಮದಾಬಾದಿನಲ್ಲಿ ಕೂಡಲೇ ಗೋವಧೆ ನಿಲ್ಲಿಸಬೇಕೆಂದೂ, ಸೂನಾಗೃಹದ ಮುಂದೆ ಉಪವಾಸ ಸತ್ಯಾಗ್ರಹ ಮಾಡುತ್ತಿರುವ ಶ್ರೀ ಅರ್ಜುನ್ ಭಗತನ ಜೀವವನ್ನು ಉಳಿಸಬೇಕೆಂದೂ ಒತ್ತಾಯಪೂರ್ವಕ ಕೋರಿದ್ದಾರೆ.

ಶಿವರಾತ್ರಿ ದಿವಸ ಶ್ರೀ ಜಗದ್ಗುರುಗಳು ಮಹಾರುದ್ರ ಯಜ್ಞವನ್ನು ನೆರವೇರಿಸಿ ನಿನ್ನೆ ದೆಹಗಾಂಗೆ ಆಗಮಿಸಿ ವೈಭವವಾಗಿ ಸ್ವಾಗತಿಸಲ್ಪಟ್ಟರು.

## ಪಂಡಿತ ರಾಮು ನರೇಶ ತ್ರಿಪಾಠಿಯವರ
## ಒಂದು ಅನುಭವ

(ಮುಂದುವರಿದುದು)

ಇಂಲಿ ; ಮಿತ್ರನ ಮನೆಯಲ್ಲಿ ಊಟ ಮಾಡಿ, ರಾತ್ರಿ ಒಂದೂವರೆ ಗಂಟೆಗೆ ಸ್ಟೇಷನ್ನಿಗೆ ಹೋದೆನು : ಅಲ್ಲಿ ರೈಲಿನ ದಾರಿ ಕಾಯುತ್ತಾ, ನಾಲ್ಕೂವರೆ ಗಂಟೆ ಕಳೆಯಿತು. ಆಮೇಲೆ ವಿಚಾರಿಸಿದಾಗ ತಿಳಿಯಿತು— ಲಕ್ನೋವಿನಲ್ಲಿ ಆ ರೈಲಿನ ಎಂಜಿನ್ನೇ ಲೈನಿನಿಂದ ತಪ್ಪಿಹೋಯಿತು, ದಾರಿಯನ್ನು ಸರಿಪಡಿಸಿ, ಬೇರೆ ಎಂಜಿನ್ನನ್ನು ಸೇರಿಸಿದ್ದಾರೆ.

ಹೀಗಾಗಿ ನಾನು ೫ ಗಂಟೆಗೆ ಬರೇಲಿಯನ್ನು ತಲ್ಪುವುದು ನಿಂತಿತು.

ಹುಗಾಂವದಿಂದ ರೈಲು ಐದೂ ಮುಕ್ಕಾಲು ಗಂಟೆಗೆ ಹೊರಟಿತು : ೧೧ ಗಂಟೆ ಹೊತ್ತಿಗೆ ಬರೇಲಿಗೆ ತಲ್ಪಿತು. ಬರೇಲಿಯಲ್ಲಿ ದೊಡ್ಡ ದಂಗೆ ನಡೆದಿದೆ ಎಂದು ಹಿಂದಿನ ಸ್ಟೇಷನ್ನಿನಲ್ಲಿಯೇ ನನಗೆ ಪ್ರಯಾಣೀಕರ ಮಾತಿನಿಂದ ತಿಳಿದಿದ್ದಿತು, ಸ್ಥಿತಿಯು ಭಯಂಕರವಾಗಿದ್ದಿತು, ರಸ್ತೆಯಲ್ಲಿ ತಿರುಗಾಡುವುದೂ ಕಷ್ಟವಾಗಿದ್ದಿತು. ಆದರೆ ನನಗೆ ನಂಬಿಕೆಯಾಗಿದ್ದಿತು— ಆಹ್ವಾನಿಸಿದ್ದ ಮಿತ್ರರು ನನ್ನ ಸಂರಕ್ಷಣೆಗೆ ತಕ್ಕ ಏರ್ಪಾಡು ಮಾಡಬಹುದು, ಸ್ಟೇಷನ್ನಿಗೂ ಬಂದು ಕಾದಿರಬಹುದು, ಮೊದಲನೇ ರೈಲಿನಲ್ಲಿ ಬಂದೇ ಇದ್ದರೂ ಅವಶ್ಯ ಎಂಡನೇ ರೈಲನ್ನು ಕಾದಿರಬಹುದು. ಆದರೆ ನನ್ನ ನಂಬಿಕೆಯು ಸುಳ್ಳಾಯಿತು.

ಸ್ಟೇಷನ್ನಿನಿಂದ ಹೊರಗೆ ಬಂದೊಡನೆಯೇ ಟಾಂಗಾವಾಲರುಗಳು ಬಂದು ನನ್ನನ್ನು ಮುತ್ತಿಕೊಂಡರು. ನಾಲ್ಕೂ ಕಡೆ ನಿಶ್ಶಬ್ದವಾಗಿದ್ದಿತು, ಕೇಷಲ ಟಾಂಗಾಗಳೂ, ಟಾಂಗಾವಾಲರು ಮಾತ್ರ ಅಲ್ಲಿ ಇದ್ದರು, ಟಾಂಗಾವಾಲರೆಲ್ಲರೂ ಮುಸಲ್ಮಾನರಾಗಿದ್ದರು. ಸ್ಥಿತಿಯು ಹೀಗೆ ಚಿಂತಾಜನಕವಾಗಿದ್ದಿತ್ತು. ಯಾಕೆಂದರೆ ದಂಗೆಯ ಕಾಲದಲ್ಲಿ ಟಾಂಗಾವಾಲರು ಮುಖ್ಯ ಯಮದೂತರಾಗುತ್ತಿದ್ದರೆಂಬುದು ಅನುಭವದ ಮಾತು ಅವರುಗಳಲ್ಲಿ ಒಬ್ಬನಿಗೆ ಮಾತ್ರ ಮೀಸೆಯು ಕತ್ತರಿಸಿರಲಿಲ್ಲ, ಅದನ್ನು ಕಂಡು ಅವನೊಬ್ಬನು ಹಿಂದೂ ಎಂದು ಭಾವಿಸಿ ಅವನ ಗಾಡಿಯನ್ನೇ ಗೊತ್ತು ಮಾಡಿಕೊಂಡೆನು ಸಾಮಾನುಗಳನ್ನು ಇರಿಸಿಕೊಂಡು ಟಾಂಗಾದಲ್ಲಿ ಹೋಗಿ ಕುಳಿತೆ ಆದರೆ ಅವನು ತಕ್ಷಣವೇ ಬಂದೆ, ಇನ್ನೊಬ್ಬ ಟಾಂಗಾವಾಲನನ್ನು ಪ್ರತ್ಯೇಕವಾಗಿ ಕರೆದುಕೊಂಡು ಹೋಗಿ ಏನೋ ಪಿಸು ಪಿಸು ಮಾತಾಡಿಕೊಂಡನು. ನನಗೆ ಸ್ವಲ್ಪ ಸಂದೇಹವಾಯಿತು. ಆದರೂ ಅತನು ಹಿಂದೂ ಎಂದು ನಂಬಿಕೆ ಇದ್ದದ್ದರಿಂದ ಆ ಸಂದೇಹ ಉಳಿಯಲಿಲ್ಲ.

ಸ್ವಲ್ಪ ಹೊತ್ತಿನ ನಂತರ ಅತನು ಆ ಇನ್ನೊಬ್ಬ ಟಾಂಗಾವಾಲನೊಂದಿಗೆ ನನ್ನ ಬಳಿಗ ಬಂದು ಅವನನ್ನು ತೋರಿಸುತ್ತಾ ಹೇಳಿದನು—" ನೀವು ಇವನ ಟಾಂಗಾದಲ್ಲಿ ಹೋಗಿರಿ. ಅದೂ ನಮ್ಮದೇ ಇರುವುದು, ನನಗೆ ಸ್ವಲ್ಪ ಬೇಡಿ ಕೆಲಸವಿದೆ,"

ನಾನಂದೆನು—" ಹೀಗಿದ್ದರೆ ಮೊದಲು ಯಾಕೆ ಇದರಲ್ಲಿ ಕುಳ್ಳಿರಿಸಿದಿ ? ನಾನು ಹೋಗುವುದಾದರೆ ಇದರಲ್ಲೇ ಸರಿ, ಇಲ್ಲದಿದ್ದರೆ ಇಲ್ಲ" ನಾನು ಕೆಳಗಿಳಿದು ನಿಂತುಕೊಂಡೆನು. ಆ ಇನ್ನೊಬ್ಬನ ಆಕಾರವು ಬಹಳ ಭಯಂಕರವಾಗಿದ್ದಿತ್ತು, ಮುಖವು ಬುಲ್‌ಡಾಗಿನಂತಿದ್ದಿತ್ತು, ಇವತ್ತಿಗೂ ಆ ರೂಪವನ್ನು ಮರೆಯುವಂತಿಲ್ಲ. ಒಣ ಕಣ್ಣಾ ದುರುಳುತನದ ಚಿಕ್ಕ ಮೂಗು ; ಇಷ್ಟರವಳಗೇ ಆತನು ಕೊಲೆ ಮಾಡಿದವನಿರಬಹುದು, ಒಂದು ವೇಳೆ ಮಾಡಿಲ್ಲವಾದರೆ ಮುಂದಾದರೂ ಮಾಡದಿರಲಾರನು. ಅವನ ಈ ಭೀಷಣ್ಣ ಆಕಾರವನ್ನು ನೋಡಿಯೇ ನಾನವನ ಟಾಂಗಾಕ್ಕೆ ಹೋಗಲು ನಿರಾಕರಿಸಿದ್ದೆನು.

(ಮುಂದುವರಿಯುವುದು

Edited, Printed and Published by M. S. Krishna Rao. at the Satyavadi Press Cheruvapura Mysore